

ಬಣ್ಣ, ಫ್ಯಾಬ್ರಿಕ್, ಆಕಾರ, ವಿನ್ಯಾಸ ಇವುಗಳನ್ನು ಸರಿಯಾಗಿ ನೋಡಿಕೊಂಡು ರೈನ್ ಜಾಕೆಟ್ ಆರಿಸಿಕೊಳ್ಳಿ. ಇದು ನಿಮ್ಮನ್ನು ಸ್ಟೈಲಿಷ್ ಆಗಿ ಕಾಣುವಂತೆ ಮಾಡುತ್ತದೆ.

### ಮಳೆಯ ಶೂ

ಬೇರೆಲ್ಲ ಕಾಲದಲ್ಲಿ ಫ್ಲಿಪ್ ಫ್ಲಾಪ್‌ಗಳನ್ನು ತೊಟ್ಟು ಆರಾಮವಾಗಿ ಇರಬಹುದು. ಆದರೆ ಮಳೆಗಾಲ ಬಂತೆಂದರೆ ಇವೆಲ್ಲವೂ ಮೂಲೆ ಸೇರುತ್ತವೆ. ಬೇರೆ ಋತುವಿನ ಸಮಯದಲ್ಲಿ ಉಡುಪಿಗೆ ತಕ್ಕ ಪಾದರಕ್ಷೆಗಳನ್ನು ಹಾಕಿಕೊಂಡು ಓಡಾಡುವವರು ಮಳೆಗಾಲದಲ್ಲಿ ಯಾವ ರೀತಿಯ ಪಾದರಕ್ಷೆ ಹಾಕಿಕೊಳ್ಳುವುದು ಎಂಬ ಚಿಂತೆಯಲ್ಲಿದ್ದೀರಾ...? ಇಲ್ಲಿದೆ ನೋಡಿ ಮಳೆಗಾಲದಲ್ಲಿ ನಿಮ್ಮ ಅಂದ ಹಾಗೂ ಕಾಲಿನ ರಕ್ಷಣೆ ಹೆಚ್ಚಿಸುವ ಮಳೆಗಾಲದ ಶೂ. ಇದು ವಾಟರ್ ಪ್ರೂಫ್ ಆಗಿರುವುದರಿಂದ ನೀವು ಎಲ್ಲಿಯಾದರೂ ಬೀಳದಂತೆ ಕಾಪಾಡುತ್ತದೆ. ಇನ್ನು ನೀವು ಮಳೆಗಾಲದಲ್ಲಿ ಟ್ರೆಕ್ಕಿಂಗ್ ಹೋಗುವ ಜಾಯಮಾನದವರಾದರೆ ಗಮ್ ಬೂಟ್ಸ್ ಹೇಳಿ ಮಾಡಿಸಿದ್ದು.

### ಸ್ವೆಟರ್ ಮತ್ತು ಸ್ಕಾರ್ಫ್

ಮಳೆಗಾಲದಲ್ಲಿ ವಾತಾವರಣ ತುಂಬಾ ಥಂಡಿಯಾಗಿರುತ್ತದೆ. ದೇಹ ಬೆಚ್ಚಗಿದ್ದರೆ ಮಾತ್ರ ಆರೋಗ್ಯ ಚೆನ್ನಾಗಿರುತ್ತದೆ. ಬೇರೆ ಋತುವಿನ ಸಮಯದಲ್ಲಿ ನೀವು ತೆಳುವಾದ ಉಡುಪನ್ನು ತೊಟ್ಟು ಸಂಭ್ರಮಪಡಬಹುದು. ಆದರೆ ಮಳೆಗಾಲದಲ್ಲಿ ಮಾತ್ರ ಬೆಚ್ಚಗಿನ ಉಡುಪು ಧರಿಸಿದರೆ ಬಚಾವಾಗಬಹುದು. ಸುರಿವ ಜಡಿ ಮಳೆಗೆ ಬೆಚ್ಚಗಿನ ಉಡುಪು ತೊಟ್ಟರೆ ದೇಹಕ್ಕೂ ಹಿತಕರ. ಯಾವ ತರಹದ ಉಡುಪು ಧರಿಸಬಹುದು ಎಂಬ ಗೊಂದಲದಲ್ಲಿದ್ದರೆ ಹೀಗೆ ಮಾಡಿ.

- ಪೈಜಾಮ ಹಾಗೂ ಸ್ವೆಟರ್ ಮಳೆಗಾಲದಲ್ಲಿ ನಿಮ್ಮನ್ನು ಬೆಚ್ಚಗಿರಿಸುವಲ್ಲಿ ಸಹಾಯ ಮಾಡುತ್ತದೆ.
- ಜೊತೆಗೆ ನೀವು ಸಾಕ್ಸ್, ಸ್ಕಾರ್ಫ್, ಜಾಕೆಟ್‌ಗಳನ್ನು ಧರಿಸಿದರೆ ಸುಂದರವಾಗಿ ಕಾಣಬಹುದು.
- ಉಣ್ಣೆಯ ಉಡುಪುಗಳನ್ನು ಮಳೆಗಾಲದಲ್ಲಿ ಹಾಕುವುದಿಲ್ಲ. ಆದರೆ ಇದನ್ನು ಲೇಯರಿಂಗ್ ಮಾಡಲು ಉಪಯೋಗಿಸಬಹುದು. ಇದು ಮಾನ್ಸೂನ್ ಲುಕ್ ನೀಡುತ್ತದೆ.

### ಟ್ರೆಂಚ್ ಕೋಟ್ ಮೋಡಿ

ಟ್ರೆಂಚ್ ಕೋಟ್‌ಗಳು ಒಂದು ನಿರ್ದಿಷ್ಟ ಹೊಲಿಗೆ ಮಾದರಿಯನ್ನು ಹೊಂದಿರುವ ಉದ್ದನೆಯ ಕೋಟ್. ಇದು ವಿಶಿಷ್ಟವಾದ ಲುಕ್ ನೀಡುತ್ತದೆ. ಮೊದಲು ಇವು ಕಪ್ಪು ಬಣ್ಣದಲ್ಲಿ ಮಾತ್ರ ಲಭ್ಯವಿದ್ದವು. ಗ್ಯಾಬರ್ಡಿನ್‌ನಿಂದ ಮಾಡಲ್ಪಟ್ಟ ಈ ಕೋಟ್ ಈಗ ವೈವಿಧ್ಯಮಯ ಬಣ್ಣಗಳಲ್ಲಿ ಸಿಗುತ್ತದೆ. ಟ್ರೆಂಚ್ ಕೋಟ್‌ಗಳು ಶರ್ಟ್ ಅಥವಾ ಟಾಪ್ ಅನ್ನು ಒದ್ದೆ ಆಗದಂತೆ ಮಳೆಯಿಂದ ರಕ್ಷಿಸಿಕೊಳ್ಳಲು ಸಹಕಾರಿಯಾಗಿದೆ. ಒಂದು ಜೋಡಿ ಸ್ಕಿನ್ನಿ ಜೀನ್ಸ್ ಅಥವಾ ಲೆಗಿಂಗ್‌ನೊಂದಿಗೆ ಈ ಟ್ರೆಂಚ್ ಕೋಟ್ ಅನ್ನು ಸ್ಟೈಲಿಂಗ್ ಮಾಡಿದರೆ ಸಖತ್ ಸ್ಮಾರ್ಟ್ ಆಗಿ ಕಾಣುತ್ತದೆ. ಜೊತೆಗೆ ರೈನ್ ಬೂಟ್ ಹಾಕಿದರೆ ಲುಕ್ ಇನ್ನಷ್ಟು ಹೆಚ್ಚುತ್ತದೆ.



### ಟ್ರೌಸರ್ಸ್

ಮಳೆಗಾಲದಲ್ಲಿ ಸುರಿಯುವ ಮಳೆಯಲ್ಲಿ ಆಫೀಸ್ ಕೆಲಸಕ್ಕೆ ಹೋಗುವುದು ನಿಜಕ್ಕೂ ಸವಾಲು. ಸಾಮಾನ್ಯವಾಗಿ ಬೆಳಿಗ್ಗೆ ಹಾಗೂ ಸಂಜೆ ಮಳೆ ಜೋರಾಗಿ ಸುರಿಯುತ್ತಿರುತ್ತದೆ. ಈ ಸಮಯದಲ್ಲಿ ಕಚೇರಿಗೆ ಹೋಗುವವರಿಗೆ ತುಂಬಾ ಕಿರಿಕಿರಿ ಆಗುತ್ತದೆ. ಧರಿಸಿದ ಬಟ್ಟೆ ಮಳೆಗೆ ಸಿಕ್ಕಿ ಒದ್ದೆಯಾಗಿರುತ್ತದೆ. ಮಳೆಗಾಲದಲ್ಲಿ ಯಾವ ರೀತಿಯ ಬಟ್ಟೆ ಧರಿಸಬಹುದು, ಯಾವ ತರಹದ ಬಟ್ಟೆಯ ಶಾಪಿಂಗ್ ಮಾಡಬಹುದು?

ಮಳೆಗಾಲದಲ್ಲಿ ಉದ್ದನೆಯ ಪ್ಯಾಂಟ್ ಧರಿಸುವ ಬದಲು ಆ್ಯಂಕಲ್ ಲೆಂತ್ ಪ್ಯಾಂಟ್ ಧರಿಸುವುದು ಸೂಕ್ತ. ಇದರಿಂದ ಮಳೆಯಲ್ಲಿ ಬಟ್ಟೆ ಒದ್ದೆಯಾಗಿ ಕಿರಿಕಿರಿ ಆಗುವುದು ತಪ್ಪುತ್ತದೆ. ಹಾಗಾಗಿ ಆ್ಯಂಕಲ್ ಲೆಂತ್ ಟ್ರೌಸರ್ಸ್ ಅಥವಾ ಪ್ಲೈನ್ ಬಣ್ಣದ ಚೆಕರ್ಡ್ ಪ್ಯಾಂಟ್ ಹೇಳಿ ಮಾಡಿಸಿದ್ದು. ಇದಕ್ಕೆ ಸರಳವಾದ ಟಾಪ್ ಹಾಕಿದರೆ ಇನ್ನಷ್ಟು ಸುಂದರವಾಗಿ ಕಾಣಬಹುದು. ಹೊರಗಿನ ವಾತಾವರಣ ತುಂಬಾ ತಂಪಾಗಿದ್ದರೆ ಇದರ ಮೇಲೊಂದು ಕೋಟ್ ಹಾಕಿದರೆ ಬೆಚ್ಚಗಿಡುತ್ತದೆ. ರೈನ್ ಶೂ ಜೊತೆಗೆ ಟೋಟ್ ಬ್ಯಾಗ್ ಹಾಕಿದರೆ ಮಳೆಗಾಲದಲ್ಲಿ ಚೆನ್ನಾಗಿ ಕಾಣಬಹುದು.

### ಪಾರ್ಟಿವೇರ್

ಕೆಲವರು ಪಾರ್ಟಿ ಇಷ್ಟಪಡುವ ವ್ಯಕ್ತಿತ್ವದವರಾಗಿರುತ್ತಾರೆ. ಹೊರಗಡೆ ಜೋರಾಗಿ ಮಳೆ ಸುರಿಯುತ್ತಿದ್ದರೆ ಎಲ್ಲಿಯೂ ಹೋಗಿ ಸುತ್ತಾಡುವುದಕ್ಕೆ ಆಗುವುದಿಲ್ಲ. ಪಾರ್ಟಿ ಮಾಡುವುದಕ್ಕೆ ಆಗುವುದಿಲ್ಲ ಎನ್ನುವವರಿಗೆ ಮಳೆಗಾಲದಲ್ಲಿ ಸುಂದರವಾಗಿ ಕಾಣಲು ಈ ರೀತಿಯಾಗಿ ಡ್ರೆಸ್ ಮಾಡಿ. ಬೆಚ್ಚಗಿನ ಅನುಭವವನ್ನು ನೀಡಲು ಸ್ಕರ್ಟ್‌ಗಳು ಅಥವಾ ಲೆಗ್ ವಾರ್ಮರ್‌ಗಳೊಂದಿಗೆ ಟಕ್ಡ್ ಇನ್ ಶರ್ಟ್‌ಗಳನ್ನು ಹಾಕಿದರೆ ಸುಂದರವಾಗಿ ಕಾಣಬಹುದು.